

ಸುವರ್ಣ ಚೆಳ್ಳೂರು
ಕಲೆ: ರೂಪಶ್ರೀ ಕಲ್ಲಿಗನೂರು



# ಬಿಳಿ ಲುಂಗಿ

ಅವತ್ತು ಹೊರಗೆ ಮಳೆ. ಮನೆಯೊಳಗೆ ಬಂಕದಲ್ಲಿ ಯಾರೋ ಇಬ್ಬರು ಬಿಳಿ ಲುಂಗಿಯುಟ್ಟವರು ಚೇರಿನಲ್ಲಿ ಕೂತಿದ್ದರು. ಅವ್ವನ ಜೋತುಬಿದ್ದ ಮುಖ, ಅಪ್ಪನ ಅಸಹಾಯಕ ನೋಟ ಅವರನ್ನೇ ದಿಟ್ಟಿಸುತ್ತಿದ್ದವು. ನೋಡನೋಡುತ್ತಿದ್ದಂತೆ ಅವ್ವ ಏರುಧ್ವನಿಯಲ್ಲಿ ಅರಚಾಡಿದಳು. ಭಯದಿಂದ ನಾನು ಶಾಂತಿ ಮನೆಗೆ ಓಡಿದೆ. ಶಾಂತಿ, ನಾನು ನಮ್ಮೂರ ಸರ್ಕಾರಿ ಸಾಲಿಯೊಳಗೆ ಕಲಿತಿದ್ವಿ. ನನಗೆ ಅವರ ಮನೆ ಅಂದ್ರೆ ಅದೇನೋ ಇಷ್ಟ ಆಗ್ತಿತ್ತು. ಅವರಪ್ಪ, ಅವ್ವ ದುಡಿಯಾಕೋದೋರು ರಾತ್ರಿಗೆ ಬರ್ತಿದ್ರು. ನಾ ಯಾವಾಗ್ಲೂ ಅವರ ಮನೇಲಿರ್ತಿದ್ದೆ. ಶಾಂತಿ ಮನೇಲಿದ್ದ ಅವರಜ್ಜಿ ಮೂಕಮ್ಮಂಗೆ ಕಣ್ಣಿರಲಿಲ್ಲ. ನಾ ಅಲ್ಲಿಗೋದಾಗೆಲ್ಲ ಕೋಲು ಹಿಡ್ಕೊಂಡು ಬಂದು ಹೊಡಿಯೋ ಹಂಗ್ ಮಾಡಿ ಮೈಕೈ ಸವರಿ 'ಅಯ್ಯ..... ಯಂಕಿ ನೀನಾssss ನಾ ಆ ಮುಂದ್ಲ ಮನಿ ನಾಗವ್ವ ಅನ್ಕಂಡಿದ್ಯ ನೋಡಂಗೆ' ಅಂತ ಎರಡೂ ಗಲ್ಲ ಹಿಂಡಿ ಹಿಪ್ಪಿ ಮಾಡ್ತಿದ್ಲು.

ಶಾಂತಿ ಮನೆ ಮುಂದೆ ಒಂದು ಕಟ್ಟೆ ಇತ್ತು. ದಿನಾಲೂ ನಾನು, ಅವಳು ಅದರ ಮೇಲೆ ಕೂತ್ಕೊಂಡು ಹೋಮ್‌ವರ್ಕ್ ಮಾಡ್ತಿದ್ವಿ.

'ಯಂಕಿ ನಂಗ್ ಗಣಿತ ಪೇಪರ್ ಕೊಡಾ, ಸಮಾಜ ಪೇಪರ್ ಕೊಡಾ' ಅಂತ ಯಾವಾಗ್ಲೂ ಶಾಂತಿ ನನ್ನನ್ನೇ ನೋಡ್ಕೊಂಡು ಬರಿಯೋಳು. 'ನೀ ಬರೆ ಬರೆ. ನನ್ನ್ ಪೇಪರ್ ನೋಡಿಕ್ಯಂಡು ಬರದ್ರ ಮಿಸ್ಸಿಗೇಳ್ತೀನಿ ನೋಡಲೇ' ಅಂತ ಅನ್ಬೇಕು ಅನ್ನಿಸಿದ್ರುನೂ, ಕೊಡಲ್ಲ ಅಂದ್ರೆ ಇವರ ಮನೆಗ್ ಕರಕೊಳ್ಳದೆ ಟೂ..ಟೂ.. ಬಿಟ್ರೆ ಅಂತನ್ನಿಸಿ ಎಲ್ಲಾ ಪೇಪರ್ ಕೊಡ್ತಿದ್ದೆ. ಆದ್ರೆ ಸಾಲಿಯೊಳಾಗ ಸೇಮ್ ಆನ್ಸರ್ ನೋಡಿ ಮಿಸ್ಸು ಇಬ್ರನ್ನೂ ಬೈದಿದ್ರು. ಕ್ಲಾಸಲ್ಲಿ ಲೀಡರ್ ಆಗಿದ್ದ ನನಗೆ ಒಂಥರಾ ಅವಮಾನ ಅನ್ನಿಸಿ. ಶಾಂತಿ ಮನೆ ಕಡೆ ಹೋಗೋದನ್ನೇ ಬಿಟ್ಟಿದ್ದೆ. ನಾ ಅವಳ ಮನೆಗೆ ಹೋಗಲ್ಲ ಅಂತ ಗೊತ್ತಾಗಿದ್ದೇ ಪಾತಿ ತಮ್ಮನೆಗೆ ಕರೀತಿದ್ಲು.

ರೋಡಿನ ಮ್ಯಾಲಿದ್ದ ಕರೆಪ್ಪನ ಅಂಗಡಿ ಎದುರಿಗೆ ಪಾತಿ ಮನೆ ಇತ್ತು. ಅವರ ಮನೆ ತುಂಬಾ ದೊಡ್ಡದಿತ್ತು, ಮನೆ ಹೊರಗೆ ಕುಂತು ಹೋಮ್‌ವರ್ಕ್ ಮಾಡುವಾಗೆಲ್ಲ ಕಣ್ಣು ದೊಡ್ಡದು ಮಾಡಿ ಪಾತಿ ಅವರ ಮನೆ ಬಗ್ಗೆ ಹೇಳ್ತಿದ್ಲು 'ಲೇ... ನಮ್ಮನ್ಯಾಗ ಇನ್ನೊಂದು ದೊಡ್ಡಮನಿ ಐತಿ ಗೊತ್ತನು... ಅಲ್ಲಿ ಚೆಂದ ಚೆಂದ ಸರ, ಜುಮಕಿ, ಲಂಗ, ದಾವಣಿ ಎಲ್ಲ ಇಟ್ಟಾನ ನಮ್ಮಪ್ಪ. ಅದನ್ನ ಯಾರಿಗೂ ತೋರಸಬಾರದಂತ. ತೋರಿಸಿದ್ರ ಅದು ಬ್ಯಾರೆರ ಮನಿಗೆ ಓಡಿ ಹೋಕ್ಕೈತಂತಲೇ. ಅದಕಾ ನಮ್ಮನ್ಯಾಗ ಬ್ಯಾರೆ ಮಂದಿನ ಕರಕನಗಲ್ಲ' ಅವಳಿದನ್ನೆಲ್ಲಾ ಕಥೆ ಮಾಡಿ ಹೇಳುವಾಗ ತೆರೆದ ಬಾಯಿ ತೆರೆದಂಗೆ ಕೇಳ್ತಾ 'ಅದೆಂಗಿರಬಹುದು' ಅಂತ ಯೋಚಿಸ್ತಿದ್ದೆ.

ಅವತ್ತೊಂದಿನ ಪಾತಿ ಮನೆಗೆ ಹೋದಾಗ ಅವರಪ್ಪ ಕುಡಿದು ಅವರವ್ವನ್ನ ಬಡ್ಯಾದು ನೋಡಿ ಅವರ ಮನಿಯೊಳಾಗ ಇದ್ದಿದ್ದ ಸರಗಳು ಬ್ಯಾರೆ ಮನಿಗೆ ಓಡಿ ಹೋಗಿರಬೋಕು ಅನ್ಕಂಡೆ. ಅವರಪ್ಪ ನಮ್ಮನ್ನೂ ಬಡಿತಾರಂತೇಳಿ ಪಾತಿ ಮತ್ತು ನಾನು ಅವರ ಮನೆ ಮುಂದೆ ಹಾಕಿದ್ದ ನೆಲ್ಲಿನ ಚೀಲದ ಮೇಲೆ